# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಮಾನ್ಯ ಸದಸ್ಯರ ಹೆಸರು | : ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 2051 |
| ಉತ್ತರಿಸಬೇಕಾದ ದಿನಾಂಕ | : 25.03.2026 |
| ಉತ್ತರಿಸಬೇಕಾದ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಗೃಹ ಮಂಡಳಿಯು ಬೆಂಗಳೂರಿನಲ್ಲಿ ಸೂರು ಹೊಂದಬೇಕೆನ್ನುವ ಬಡ-ಮಧ್ಯಮ ವರ್ಗದವರಿಗಾಗಿ ಕೆಂಗೇರಿ ಹೋಬಳಿಯ ಬಿ.ಎಂ ಕಾವಲ್‌ನಲ್ಲಿ ಹೊಸ ಯೋಜನೆಯನ್ನು ಪ್ರಾರಂಭಿಸಲಾಗಿದೆಯೇ ; (ಹಾಗಿದ್ದಲ್ಲಿ, ಈ ಬಗ್ಗೆ ವಿವರ ನೀಡುವುದು) | ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ನಗರ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ ಕಾವಲ್ ಹಾಗೂ ಇತರ ಗ್ರಾಮಗಳಲ್ಲಿನ 500 ಎಕರೆ ಜಮೀನಿನಲ್ಲಿ, ಶೇ.50:50 ರ ಅನುಪಾತದ ಪಾಲುದಾರಿಕೆಯಡಿ ವಸತಿ ಯೋಜನೆ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ವಇ 212 ಕಗೃಮಂ 2022, ದಿನಾಂಕ:25.06.2024 ರಲ್ಲಿ ಅನುಮೋದನೆ ನೀಡಲಾಗಿದೆ. ಸದರಿ ಆದೇಶದಂತೆ ಭೂಸಂಗ್ರಹಣೆ ಪ್ರಗತಿಯಲ್ಲಿದ್ದು, ಭೂಸಂಗ್ರಹಣೆ ಪೂರ್ಣಗೊಂಡ ನಂತರ ಯೋಜನೆಯನ್ನು ಪ್ರಾರಂಭಿಸಲಾಗುವುದು. |
| ಆ) | ಈ ಯೋಜನೆಗಾಗಿ ಪ್ರದೇಶದಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದೆ ; (ವಿವರ ಒದಗಿಸುವುದು) | ಬೆಂಗಳೂರು ನಗರ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ ಕಾವಲ್ ಗ್ರಾಮದಲ್ಲಿ ವಿವಿಧ ಸರ್ವೆ ನಂಬರ್‌ಗಳಿಂದ ಒಟ್ಟು 314.20.08 (ಎಕರೆ-ಗುಂಟೆ) ಜಮೀನನ್ನು 2013 ರ RFCTLARR ಕಾಯ್ದೆಯ ಕಲಂ 11(1) ರನ್ವಯ ಪ್ರಾಥಮಿಕ ಅಧಿಸೂಚನೆಯನ್ನು ದಿನಾಂಕ:02.07.2025 ರಂದು ಹೊರಡಿಸಲಾಗಿದೆ. |
| ಇ) | ಯಾವ ಅನುಪಾತದಲ್ಲಿ ಯಾವ ಮಾನದಂಡಗಳನ್ನು ಅನುಸರಿಸಿ, ರೈತರಿಂದ ಜಮೀನುಗಳನ್ನು ಪಡೆಯಲಾಗುತ್ತಿದೆ ; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ವಇ 212 ಕಗೃಮಂ 2022, ದಿನಾಂಕ:25.06.2024 ರಂತೆ ಶೇ.50:50 ರ ಅನುಪಾತದ ಪಾಲುದಾರಿಕೆಯಡಿಯಲ್ಲಿ ಭೂಮಾಲೀಕರಿಂದ ಜಮೀನುಗಳನ್ನು ಪಡೆಯಲಾಗುತ್ತಿದೆ. |
| ಈ) | ಈ ಯೋಜನೆಯಿಂದ ಲಭ್ಯವಾಗುವ ನಿವೇಶನಗಳ ಸಂಖ್ಯೆ ಎಷ್ಟು ; ಹಾಗೂ ಈ ಯೋಜನೆಗಾಗಿ ಸರ್ಕಾರ ಖರ್ಚು ಮಾಡುತ್ತಿರುವ ಮೊತ್ತವೆಷ್ಟು ; (ಮಾಹಿತಿ ಒದಗಿಸುವುದು) | ವಿಸ್ತೃತ ಯೋಜನಾ ವರದಿ ಅಂತಿಮಗೊಂಡ ನಂತರ ನಿವೇಶನಗಳ ಮಾಹಿತಿ ಲಭ್ಯವಾಗುವುದು. ಸದರಿ ಯೋಜನೆಯನ್ನು ರೂ.1066.50 ಕೋಟಿ ಯೋಜನಾ ವೆಚ್ಚದಲ್ಲಿ ಅನುಷ್ಠಾನಗೊಳಿಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ:ವಇ 212 ಕಗೃಮಂ 2022, ದಿನಾಂಕ:25.06.2024 ರಲ್ಲಿ ಅನುಮೋದನೆಯಾಗಿದೆ. |
| ಉ) | ಈಗಾಗಲೇ ಬಿಡಿಎ ಮತ್ತು ಗೃಹ ಮಂಡಳಿಯಿಂದ ನಿರ್ಮಿಸಿರುವ ಮನೆಗಳು ಕಳಪೆ ಮಟ್ಟದಿಂದ ಕೂಡಿದ್ದು, ಇವುಗಳನ್ನು ವಿಲೇವಾರಿ ಮಾಡದೆ ಯೋಜನೆಗೆ ಇಷ್ಟೊಂದು ಹಣವನ್ನು ವಿನಿಯೋಗಿಸುತ್ತಿರುವುದು ಸರಿಯಾದ ಕ್ರಮವೇ : (ವಿವರ ನೀಡುವುದು. | ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ನಗರದಲ್ಲಿ ನಿರ್ಮಿಸಿರುವ ಎಲ್ಲಾ ಮನೆಗಳನ್ನೂ ಸಾರ್ವಜನಿಕರಿಗೆ ಹಂಚಿಕೆ ಮಾಡಿದ್ದು, ಯಾವುದೇ ಮನೆಗಳು ಹಂಚಿಕೆಗೆ ಬಾಕಿ ಇರುವುದಿಲ್ಲ. ಮಂಡಳಿ ವತಿಯಿಂದ ನಿರ್ಮಿಸುವ ಮನೆಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದು, ಮನೆಗಳ ಗುಣಮಟ್ಟವನ್ನು ಕಾಪಾಡಲು ಯೋಜನಾ ಉಸ್ತುವಾರಿ ಸಂಸ್ಥೆಯವರನ್ನು ನೇಮಿಸಿ, ಮನೆಗಳ ನಿರ್ಮಾಣದಲ್ಲಿ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲಾಗುತ್ತದೆ.<br><br>ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಸತಿ ಅವಶ್ಯಕತೆಯ ಹಿನ್ನೆಲೆಯಲ್ಲಿ ಸಮಾಜದ ಎಲ್ಲಾ ವರ್ಗದ ಜನರಿಗೆ ವಸತಿ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ಹೊಸ ವಸತಿ ಯೋಜನೆಗಳನ್ನು ಸರ್ಕಾರದ ಅನುಮೋದನೆ ಪಡೆದು ಕರ್ನಾಟಕ ಗೃಹ ಮಂಡಳಿ ವತಿಯಿಂದ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ :ವಇ 61 ಕಗೃಮಂ 2026

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು.